ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಹೊನ್ನಿಗನ ಹಟ್ಟಿಯಲ್ಲಿ ಆಶ್ರಯ ನಿವೇಶನ ವಿತರಣೆಯಲ್ಲಿ ಅವ್ಯವಹಾರ.

87991374) ಶ್ರೀ ಹೆಚ್.ಎಸ್. ಬಾಲಕೃಷ್ಣ (ಮಾಗಡಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಹೊನ್ನಿಗನ ಹಟ್ಟಿಯಲ್ಲಿ ಆಶ್ರಯ ನಿವೇಶನ ವಿತರಣೆಯಲ್ಲಿ 1992ರಿಂದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಅವ್ಯವಹಾರಕ್ಕೆ ಕಾರಣರಾದವರು ಯಾರು ಅವ್ಯವಹಾರಕ್ಕೆ ಕಾರಣರಾದವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಬಂದಿದೆ.

ಆ) ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ 'ಡಿ'ನೌಕರರಾದ ಶ್ರೀ ಗಂಗಬೈರಯ್ಯ, ರೆವಿನ್ಯೂ ಇನ್ಸ್‌ಪೆಕ್ಟರ್ ಅಬ್ದುಲ್ ಸುಭಾನ್ ಎಂಬುವವರು ಈ ಅವ್ಯವಹಾರಕ್ಕೆ ಕಾರಣರಾಗಿರುವುದಾಗಿ ತಿಳಿದುಬಂದಿದ್ದು ಸದರಿಯವರ ಮೇಲೆ ರಾಜಣ್ಣ ಎಂಬುವವರು ನೀಡಿರುವ ದೂರಿನ ಮೇರೆಗೆ ಬೆಂಗಳೂರಿನ ಅಲಸೂರು ಗೇಟ್ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ. ಕಲಂ 465, 468, 471 420(ಬಿ) ಹಾಗೂ 420 ರಂತೆ ಕ್ರೈ ನಂ.111 : 99ರಂತೆ ಪ್ರಕರಣ ದಿನಾಂಕ 24-2-99 ರಂದು ದಾಖಲಾಗಿ, ವಿಚಾರಣೆ ನಡೆಯುತ್ತಿದೆ.

ಕೆಂಪೇಗೌಡ ಜಿಲ್ಲೆಯ ರಚನೆ.

880(1371) ಶ್ರೀ ಹೆಚ್.ಸಿ. ಬಾಲಕೃಷ್ಣ ವಿಧಾನಸಭಾ ಸದಸ್ಯರು (ಮಾಗಡಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ವಿಭಜಿಸಿ ಮಾಗಡಿ/ರಾಮನಗರ/ಚನ್ನಪಟ್ಟಣ/ಸಾತನೂರು/ಕನಕಪುರ ಕ್ಷೇತ್ರವನ್ನೊಳಗೊಂಡ ಜಿಲ್ಲೆಯನ್ನಾಗಿ ರಚನೆಮಾಡಿ ಕೆಂಪೇಗೌಡ ಜಿಲ್ಲೆ ಎಂದು ಹೆಸರಿಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ;

2. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?